KARNATAKA INDUSTRIAL AREAS DEVELOPMENT BOARD

(A Government of Karnataka Undertaking)

# 49, 4th & 5th Floors, Khanija Bhavan, Race Course Road, Bengaluru - 560 001

Phone : 080-22265383 Fax : 080-22267901

Website : www.kiadb.in email: ceoemkiadb@gmail.com


No.: KIADB/JD(T&CP)/ 8044 /2016-17 Date: 18-08-2016

**NOTIFICATION**

Sub: Availing services of technical experts (Architects/ Engineers / Town Planners /Structural Engineers) regarding construction of building in the Industrial Areas developed by Karnataka Industrial Areas Development Board.

*****

KIADB is developing Industrial Areas with all infrastructural facilities throughout the state after acquiring land and is allotting the plots to perspective entrepreneurs. The Board is according construction permit (approval to Development Plan/Building Plan and issuing Commencement Certificate and Occupancy Certificate) for the buildings to be constructed by entrepreneurs in the allotted plots.

It is found necessary to obtain services of Technical Experts (Architects/ Engineers / Town Planners /Structural Engineers) for the design and preparation of Development Plan/Building Plan and supervision of buildings constructed by entrepreneurs in industrial areas of the Board. The empanelled Technical Experts are authorized to prepare Development Plan/Building Plan, Structural Designs and Architectural Drawings for buildings to be constructed in the industrial areas of the Board and also they will have be delegated power to issue Commencement Certificate and Occupancy Certificate (before and after completing building construction).

...2

Hence, interested Technical Experts (Architects/ Engineers / Town Planners /Structural Engineers) are requested to register their names in the Board. Application form and the procedure for registration in the Board is published in the website: www.kiadb.in. Interested Technical Experts (Architects/ Engineers / Town Planners /Structural Engineers) should submit the application in the prescribed format **within 30 days** from the date of publication of this Notification in the news paper.

Chief Executive Officer and
Executive Member

ISO 9001
KIADB
BANGALORE

# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, 4 ಮತ್ತು 5ನೇ ಮಹಡಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001
ದೂರವಾಣಿ : 080-22265383 ಫ್ಯಾಕ್ಸ್ : 080-22267901
ವೆಬ್‌ಸೈಟ್ : www.kiadb.in ಇ-ಮೆಯಿಲ್ : ceoemkiadb@gmail.com

ಸಂ.ಕ.ಕೈ.ಪ್ರ.ಅ.ಮಂ./ಜ.ನಿ.(ನ.ಗ್ರಾ.ಯೋ.)/ 8044 /2016–17 ದಿನಾಂಕ:18–08–2016

## :: ಪ್ರಕಟಣೆ ::

ವಿಷಯ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಅಭಿವೃದ್ಧಿ ಪಡಿಸಿರುವ ಕೈಗಾರಿಕಾ ಪ್ರದೇಶಗಳಲ್ಲಿ ಕಟ್ಟಡ ನಿರ್ಮಾಣ ಸಂಬಂಧ ತಾಂತ್ರಿಕ ಪರಿಣಿತರ (Architects/ Engineers / Town Planners/Structural Engineers) ಸೇವೆಯನ್ನು ಪಡೆಯುವ ಕುರಿತು.

*****

ಭಾರತ ಸರ್ಕಾರವು Ease of Doing Business ಅಡಿ ಸಾರ್ವಜನಿಕ ಕೆಲಸಗಳನ್ನು ನಿಗದಿತ ಕಾಲಮಿತಿಯೊಳಗಾಗಿ ನಿರ್ವಹಿಸಲು Business Reform Action Plan-2016 ಜಾರಿಗೊಳಿಸಿದ್ದು, ಇದನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕಾರ್ಯಗತಗೊಳಿಸುತ್ತಿದೆ.

ಮಂಡಳಿಯು ರಾಜ್ಯದಾದ್ಯಂತ ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಂಡು ಎಲ್ಲಾ ಮೂಲ ಸೌಲಭ್ಯಗಳೊಂದಿಗೆ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಿ ಉದ್ದಿಮೆದಾರರಿಗೆ ನಿವೇಶನಗಳನ್ನು ಹಂಚಿಕೆ ಮಾಡುತ್ತಿದೆ. ಹಂಚಿಕೆ ಮಾಡಲಾದ ನಿವೇಶನಗಳಲ್ಲಿ ಉದ್ದಿಮೆದಾರರು ಕಾರ್ಖಾನೆ ಕಟ್ಟಡ ನಿರ್ಮಾಣ ಮಾಡುವುದಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ನಕ್ಷೆ /ಕಟ್ಟಡ ನಕ್ಷೆಗಳಿಗೆ ಅನುಮೋದನೆ, ಕಟ್ಟಡ ಪ್ರಾರಂಭಿಕ ಪ್ರಮಾಣ ಪತ್ರ (Commencement Certificate) ಮತ್ತು ಸ್ವಾಧೀನಾನುಭವದ ಪ್ರಮಾಣ ಪತ್ರ (Occupancy Certificate) ಗಳನ್ನು ಮಂಡಳಿಯಿಂದ ನೀಡಲಾಗುತ್ತಿದೆ.

ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ಉದ್ದಿಮೆದಾರರು ಕಾರ್ಖಾನೆ ಕಟ್ಟಡ ನಿರ್ಮಾಣ ಮಾಡುವುದಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಅಭಿವೃದ್ಧಿ ಯೋಜನೆ/ ಕಟ್ಟಡ ನಕ್ಷೆಗಳನ್ನು ತಯಾರಿಸುವುದು, ವಿನ್ಯಾಸಗೊಳಿಸುವುದು ಮತ್ತು ಮೇಲ್ವಿಚಾರಣೆಗಾಗಿ ತಾಂತ್ರಿಕ ಪರಿಣಿತರ (Architects/ Engineers / Town Planners /Structural Engineers) ಸೇವೆಯು ಅವಶ್ಯಕವಾಗಿರುತ್ತದೆ. ಮಂಡಳಿಯಲ್ಲಿ ನೋಂದಾಯಿತ ತಾಂತ್ರಿಕ ಪರಿಣಿತರಿಗೆ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನದ ಅಭಿವೃದ್ಧಿ ನಕ್ಷೆ/ ಕಾರ್ಖಾನೆ ಕಟ್ಟಡದ ನಕ್ಷೆಗಳನ್ನು ತಯಾರಿಸಲು ಮತ್ತು Structural

...2

Design ಮತ್ತು Architectural Drawings ಗಳನ್ನು ಪ್ರಮಾಣೀಕರಿಸಲು ಅವಕಾಶವಿರುತ್ತದೆ ಹಾಗೂ ಪ್ರಾರಂಭಿಕ ಪ್ರಮಾಣ ಪತ್ರ (Commencement Certificate) ಮತ್ತು ಸ್ವಾಧೀನಾನುಭವದ ಪ್ರಮಾಣ ಪತ್ರ (Occupancy Certificate) ಗಳನ್ನು ನೀಡಲು (ಕಟ್ಟಡ ನಿರ್ಮಾಣ ಹಂತ/ ಪೂರ್ಣಗೊಳಿಸಿದ ಹಂತದಲ್ಲಿ ಅನ್ವಯವಾಗುವಂತೆ) ಅಧಿಕಾರವನ್ನು ಪ್ರತ್ಯಾಯೋಜನೆ ಮಾಡಲಾಗುವುದು.

ಆದಕಾರಣ ತಾಂತ್ರಿಕ ಪರಿಣಿತರು (Architects/ Engineers / Town Planners /Structural Engineers) ತಮ್ಮ ಹೆಸರನ್ನು ಮಂಡಳಿಯಲ್ಲಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ನೋಂದಾವಣಿ ಮಾಡಿಕೊಳ್ಳಲು ಅನುಸರಿಸಬೇಕಾದ ಕ್ರಮಗಳು ಮತ್ತು ಅರ್ಜಿ ನಮೂನೆಗಳನ್ನು ಮಂಡಳಿಯ ಜಾಲತಾಣ www.kiadb.in ದಲ್ಲಿ ಪ್ರಕಟಿಸಲಾಗಿದೆ. ಆಸಕ್ತಿಯುಳ್ಳ ತಾಂತ್ರಿಕ ಪರಿಣಿತರು (Architects/ Engineers / Town Planners /Structural Engineers) ಮಂಡಳಿಯಲ್ಲಿ ನೋಂದಾಯಿಸಿಕೊಳ್ಳಲು 30 ದಿನಗಳ ಒಳಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸಲು ಕೋರಲಾಗಿದೆ.

ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಮತ್ತು
ಕಾರ್ಯನಿರ್ವಾಹಕ ಸದಸ್ಯರು